MYSORE LEGISLATIVE ASSEMBLY

THIRTY-FIRST DAY.

Friday, 2nd August 1957.

The House met in the Assembly Hall, Vidhana Soudha, Bangalore, at One of the Clock.

MR. SPEAKER (SRI S. R. KANTHI, B.A.; LL.B.) in the Chair.

QUESTIONS AND ANSWERS

Relief to the sufferers in the struggle for Liberation of Ramdurga Samsthan.

Q.—256. Sri M. S. PATTAN (Ramdurg).—

Will the Government be pleased to state:—

(*a*) the total amount of relief paid so far by the former Bombay Government to sufferers who were put to hardships in the struggle launched for the liberation of Ramdurga Samsthan;

(*b*) the balance amount yet to be paid to them;

(*c*) the number of applications submitted to the former Bombay Government with a request to grant relief for loss of property, life, etc., in the above struggle;

(*d*) whether those applications have been sent to them for their necessary action;

(*e*) if so, whether they are considering the same;

(*f*) whether they propose to arrange for the restoration of houses, lands and such other movable and immovable property, which were lost in the above struggle, to their respective owners and whether they intend also to take suitable steps to restore the fine amount collected during the above struggle?

A.—Sri S. NIJALINGAPPA (Chief Minister).—

(*a*) Rs. 26,487-3-3.

(*b*) Rs. 7,176-11-8.

(*c*) From the records available here it appears that about ten applications were received by the Government of Bombay for grant of such relief.

(*d*) All applications were disposed of by the Government of Bombay except one application from Shri H. N. Halyal which has now been passed on to this Government for consideration.

(*e*) Yes.

(*f*) Each case is examined on merits.

ಶ್ರೀ ಎಂ. ಎಸ್. ಪಟ್ಟಣ್.—(ಬ)ಗೆ ಉತ್ತರವಾಗಿ 7176-11-8 ಪೈ ಬಾಕಿ ನಿಂತಿದೆ ಎಂದು ತಿಳಿಸಲಾಗಿದೆ. ಈ ಮೊಬಲಗನ್ನು ಇನ್ನೂ ಏಕೆ ಕೊಟ್ಟಿಲ್ಲ?

*ಶ್ರೀ ಎಸ್. ನಿಜಲಿಂಗಪ್ಪ.—ಬಹುಶಃ ಈ ಮೊಬಲಗನ್ನು ಯಾರಿಗೆ ಕೊಡಬೇಕೆಂಬುದು ಇನ್ನೂ ಖಚಿತವಾಗಿ ನಿರ್ಧರವಾಗಿಲ್ಲವೆಂದು ತೋರುತ್ತದೆ. ಆದರೆ ಈಗ ನಿರ್ಧರವಾಗದೆ ಇನ್ನೂ ಒಂದು ಕೇಸು ಹಾಗೆಯೇ ಉಳಿದಿದೆ.

ಶ್ರೀ ಎಂ. ಎಸ್. ಪಟ್ಟಣ್.—ಸರ್ಕಾರದವರು (c)ಗೆ ಉತ್ತರವಾಗಿ ಇನ್ನು ಒಂದರ್ಜಿ ಮಾತ್ರ ಇತ್ಯರ್ಥವಾಗದೆ ಉಳಿದಿದೆ ಎಂದು ತಿಳಿಸಿದ್ದಾರೆ. ಅಲ್ಲಿ ಹಾಡೇ ಹಗಲೇ 30-40 ಅಂಗಡಿಗಳ ದರೋಡೆಯಾಗಿರುವಾಗ ಅಲ್ಲಿ 10 ಅರ್ಜಿಗಳೇಕೆ, ಇನ್ನೂ ನೂರಾರು ಅರ್ಜಿಗಳು ಸರ್ಕಾರದವರ ಕಡೆಗೆ ಹೋಗಿರಬೇಕಲ್ಲವೇ?

ಶ್ರೀ ಎಸ್. ನಿಜಲಿಂಗಪ್ಪ.—ಬೊಂಬಾಯಿ ಸರ್ಕಾರದವರು ಅವರಿಗೆ ಹತ್ತು ಅರ್ಜಿಗಳು ಬಂದಿದ್ದವೆಂದೂ, ಆ ಪೈಕಿ ತೀರ್ಮಾನವಾಗದೆ ಉಳಿದ ಒಂದು ಅರ್ಜಿಯನ್ನು ನಮ್ಮ ಕಡೆಗೆ ಕಳುಹಿಸಿದ್ದಾರೆ. ಹಾಗೆ ಇನ್ನೂ

* Asterisk indicates that the remarks or speeches have not been revised by the Member concerned.

(ಶ್ರೀ ಎಸ್. ನಿಜಲಿಂಗಪ್ಪ)

ಬಾಕಿ ಇರತಕ್ಕ ಸಂದರ್ಭಗಳಿದ್ದರೆ, ಮಾನ್ಯ ಸದಸ್ಯರು ತಿಳಿಸಿದರೆ ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಎಂ. ಎಸ್. ಪಟ್ಟಣ್.—ಹತ್ತು ಅರ್ಜಿದಾರರ ಪೈಕಿ ಹಲ್ಯಾಳ ಎಂಬ ಒಬ್ಬರಿಗೆ ಇನ್ನೂ ಸರ್ಕಾರ ಪರಿಹಾರ ಕೊಟ್ಟಿಲ್ಲವೆಂದು ಉತ್ತರದಲ್ಲಿ ತಿಳಿಸಿದೆ. ನಾಲ್ಕು ಜನರು ಗುಂಡಿಗೆ ಆಹುತಿಯಾಗಿ, ಒಂಬತ್ತು ಜನರು ಫಾಸಿಹೋಗಿ, ಐದು-ಆರು ಜನರು ತಲೆ ತಪ್ಪಿಸಿ ಕೊಂಡು ಹೋಗಿದ್ದರು. ಇಷ್ಟು ಜನರ ಆಸ್ತಿ ಪಾಸ್ತಿಗಳನ್ನು ಸರ್ಕಾರದವರಿನ್ನೂ ವಾಪಸ್ ಮಾಡದಿರಲು ಕಾರಣವೇನ ?

ಶ್ರೀ ಎಸ್. ನಿಜಲಿಂಗಪ್ಪ.—ಸರ್ಕಾರಕ್ಕೆ ಒಟ್ಟು ಬಂದಿರತಕ್ಕ ಅರ್ಜಿಗಳು ಹತ್ತು. ಆ ಪೈಕಿ ಒಂಬತ್ತು ಅರ್ಜಿಗಳು ಬೊಂಬಾಯಿ ಸರ್ಕಾರದಲ್ಲಿ ತೀರ್ಮಾನ ವಾಗಿವೆ. ಉಳಿದಿದ್ದ ಒಂದು ಅರ್ಜಿಯನ್ನು ಬೊಂಬಾಯಿ ಸರ್ಕಾರದವರು ನಮ್ಮ ಕಡೆಗೆ ಕಳುಹಿಸಿ ದ್ದಾರೆ. ಈಗ ನಿಕಾಲಯಾಗದೆ ನಮ್ಮ ಕಡೆ ಉಳಿದಿರು ವುದು ಒಂದು ಅರ್ಜಿ ಮಾತ್ರ. ಹಾಗೆ ತಲೆತಪ್ಪಿಸಿ ಕೊಂಡು ಓಡಿಹೋಗಿದ್ದವರು ಈಗ ಅರ್ಜಿ ಕೊಟ್ಟರೆ ನಾವು ಪರಿಶೀಲನೆ ಮಾಡುತ್ತೇವೆ.

ಶ್ರೀ ಎಂ. ಎಸ್. ಪಟ್ಟಣ್.—ಕೆಲವು ಕೆ.ಪಿ.ಸಿ.ಸಿ. ಯ ಮುಖಂಡರೂ ಮತ್ತು ಸೆಂಟ್ರಲದಲ್ಲಿಯ ಕೆಲವು ಮುಂದಾಳುಗಳೂ ಸೇರಿ ಈ ಬಗ್ಗೆ ತಮ್ಮ ಕ್ಕೈವಾಡ ನಡೆಸಿ-ತಮ್ಮ ಒಂದು ವರ್ಚಸ್ಸಿನಿಂದ ಈ ಪ್ರಶ್ನೆಯನ್ನೇ ಮುಚ್ಚಿ ಹಾಕಬೇಕೆಂದು ಪ್ರಯತ್ನ ಹೂಡಿದ್ದು ಸರ್ಕಾರ ದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಆ ವಿಚಾರ ಮಾನ್ಯ ಸದಸ್ಯರಿಗೆ ಗೊತ್ತಾಗಿರಬಹುದು. ಆದರೆ ನನಗೇನೂ ಆ ವಿಚಾರಗಳು ಗೊತ್ತಿಲ್ಲ.

ಶ್ರೀ ಬಿ. ಕೆ. ನಾಗೂರ್.—ಅರ್ಜಿ ಬಂದರೆ ಪರಿಹಾರ ಕೊಡುವುದನ್ನು ವಿಚಾರ ಮಾಡುತ್ತೇವೆಂದು ಹೇಳಲಾ ಯಿತು. ಆ ಒಂಬತ್ತು ಜನ ಫಾಸಿ ಆದವರು ಅರ್ಜಿ ಕೊಟ್ಟರೆ ಪರಿಹಾರ ಕೊಡಲು ಆಲೋಚನೆ ಮಾಡು ತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಫಾಸಿ ಆದವರು ಹೇಗೆ ಪರಿಹಾರಕ್ಕೆ ಅರ್ಜಿ ಹಾಕುತ್ತಾರೋ ನನಗೆ ಅರ್ಥ ವಾಗದು !

ಶ್ರೀ ಬಿ. ಕೆ. ನಾಗೂರ್.—ಅಂದರೆ ಅವರ ಹತ್ತಿರದ ಸಂಬಂಧಿಗಳು.

ಶ್ರೀ ಎಸ್. ನಿಜಲಿಂಗಪ್ಪ.—ಕಾನೂನು ಪ್ರಕಾರ ಮಾಡುತ್ತೇವೆ.

ಶ್ರೀ ಎಂ. ಎಸ್. ಪಟ್ಟಣ್.—1939 ನೆ ಜುಲೈ ಏಳನೆ ತಾರೀಖಿಗೆ ಹಾಜರಾಗಲಕ್ಕೆ ಮಹದೇವಪ್ಪ-ಪಟ್ಟಣಿಗ-ಬಸಪ್ಪ-ಎರೆಗಾರ್ ಇತ್ಯಾದಿ ಆ ಹೋರಾಟ ದಲ್ಲಿ ಮುಖ್ಯಸ್ಥರಾಗಿದ್ದವರಿಗೆ ನೋಟೀಸ್ ಕೊಟ್ಟಿದ್ದರು. ಅವರು ಆ ದಿವಸ ಹಾಜರಾಗಿದ್ದರೆ ಅವರಿಗೆ ಫಾಸಿ ಕೊಡುತ್ತಿದ್ದರು. ಹಾಗೆ ಆ ದಿವಸ ಯಾರಾರು ಪ್ರಾಣ ಭಯದಿಂದ ಹಾಜರಾಗಲಿಲ್ಲವೋ ಅಂಥವರ ಆಸ್ತಿಯನ್ನೆಲ್ಲಾ ಸರ್ಕಾರದವರು ಕಸಿದುಕೊಂಡಿದ್ದಾ ರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಅರ್ಜಿ ಬಂದರೆ ವಿಚಾರ ಮಾಡುತ್ತೇವೆ.

Sri G. B. SHANKAR RAO.—Will the applicants be able to get back their properties at least during their life time ?

Sri S. NIJALINGAPPA.—Whenever they desire they will get.

ಶ್ರೀ ಎಂ. ಎಸ್. ಪಟ್ಟಣ್.—ಹಾಗಾದರೆ ಫಾಸಿ ಆದ ಎಲಗಾರ್ ಬನಪ್ಪ ಮತ್ತು ಆತನ ಅತಿ ಬಂಧುಗ ಳಾದ ತಂದೆ-ಮಗ ಇಬ್ಬರನ್ನೂ ಫಾಸಿಗೆ ಕೊಟ್ಟಿದ್ದ ರಿಂದ ಈಗ ಅವರ ಆಸ್ತಿಯನ್ನು ಇನ್ನುವರೆಗೂ ಆ ಫಾಸಿ ಆದವರ ಹೆಂಡತಿ ಮಕ್ಕಳಿಗೇಕೆ ಕೊಟ್ಟಿಲ್ಲ ?

ಶ್ರೀ ಎಸ್. ನಿಜಲಿಂಗಪ್ಪ.—ಅವರು ಅರ್ಜಿ ಕೊಟ್ಟರೆ ನಾನು ವಿಚಾರ ಮಾಡುತ್ತೇನೆ.

Lands granted out of gomal in Kumkumanahalli village, Tumkur Taluk.

Q.—379. **Sri G. N. PUTTANNA** (Tumkur).—

Will the Government be pleased to state :—

(*a*) the total number of cattle (such as bullocks, cows, goats, sheep, horses, asses, buffaloes, etc.) in Kumkumanahalli village, Kasaba Hobli, Tumkur Taluk ;

(*b*) the total number of houses in the said village ;

(*c*) the extent of gomal land now available for the village cattle ;

(*d*) the number of persons who have been granted lands out of the gomal lands since past three years (their names with the extent of lands granted to them together with the upset price fixed per acre may be furnished) ;

(*e*) whether those grantees are actual cultivators or absentee land-holders ?

A.—**Sri M. P. PATIL** (Minister for Revenue).—

(*a*) 380.

(*b*) 108.

(*c*) 5 acres and 22 guntas.

(*d*) Nil.

(*e*) Does not arise in view of the answer to (*d*).

ಶ್ರೀ ಜಿ. ಎಚ್. ಪುಟ್ಟಣ್ಣ.—ತಾವು (ಎ)ಗೆ ಕೊಟ್ಟಿರ ತಕ್ಕ ಉತ್ತರಕ್ಕೂ ಪುನಃ (ಸಿ ಗೆ ಕೊಟ್ಟಿರತಕ್ಕ ಉತ್ತರಕ್ಕೂ ಹೋಲಿಕೆ ಹಾಕಿ ನೋಡಿದರೆ ಅಷ್ಟು ಪ್ರದೇಶ ಸಾಕೇನು ?

*ಶ್ರೀ ಎಂ. ಪಿ. ಪಾಟೀಲ್.—ಅಷ್ಟು ಸಾಕಾಗುವು ದಿಲ್ಲವೆಂದು ನನಗೂ ಅನಿಸುತ್ತದೆ.